**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.419/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಪ್ರಮೀಳ | ಫ್ರಾಸಾ-1 |
| ಗಂಡನ ಹೆಸರು | : ರಮೇಶ್ | ಚಾಸಾ-1 |
| ವಯಸ್ಸು | : 36 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯಾಪಾರ | ದಿನಾಂಕಃ 03.08.2026. |
| ವಾಸಸ್ಥಳ | : ಗಂಗನಕುಡಿಗೆ | |

**:ಮುಖ್ಯ ವಿಚಾರಣೆ ಫ್ರಾಜ್ಞ್ಯಾಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿಗಳ ಪರಿಚಯ ನನಗಿದೆ.

ಸಾಕ್ಷಿಯು ದಿ.28.12.2023 ರಂದು ನೀಡಿದ ದೂರು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.28.12.2023 ರಂದು ಜರುಗಿಸಿದ ಮಹಜರ್ ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ತೆಗೆದ ಪೋಟೋವನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.08.01.2024 ರಂದು ಜರುಗಿಸಿದ ಅಮಾನತ್ ಮಹಜರ್ ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ನ್ನು ನಿಪಿ-4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ತೆಗೆದ ಪೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು.

ಕಳೆದ 3-4 ವರ್ಷದ ಹಿಂದೆ ಮೇಲೆ ಗುರುತಿಸಿದ ಸಹಿಗಳನ್ನು ಮಾಡಿರುತ್ತೇನೆ. ಸದರಿ ಸಹಿಗಳನ್ನು ಯಾವ ವಿಷಯದ ಕುರಿತು ಮಾಡಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಅದರಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ-3 ಮತ್ತು 5 ನ್ನು ಯಾವ ಕಾರಣಕ್ಕಾಗಿ ತೆಗೆಯಲಾಗಿರುತ್ತದೆ ಎಂದು ಮಾಹಿತಿ ಇರುವುದಿಲ್ಲ. ನಿಪಿ-5 ರಲ್ಲಿ ಕಾಣುತ್ತಿರುವ ವಸ್ತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾರ ಮುಂದೆಯೂ ಹೇಳಿಕೆ ನೀಡಿರುವುದಿಲ್ಲ. ಇದನ್ನು ಹೊರತುಪಡಿಸಿ ನನಗೆ ಇನ್ನಾವುದೇ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಫ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಫ್ರಾಜ್ಞ್ಯಾಸ.ಸ.ಅ. ರವರಿಂದ:**

ಸಾಕ್ಷಿಗೆ ದಿ.08.01.2024 ರ ಹೇಳಿಕೆಯನ್ನು ಓದಿ ಹೇಳಲಾಗಿ ಸಾಕ್ಷಿಯು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ ಆದ ಕಾರಣ ಸದರಿ ಹೇಳಿಕೆಯ ಭಾಗವನ್ನು ನಿಪಿ-6 ಎಂದು ಗುರುತಿಸಲಾಯಿತು. ದಿ.05.01.2024 ರಂದು ಪೋಲಿಸರ ಕೋರಿಕೆಯ ಮೇರೆಗೆ ನ್ಯಾಯಾಧೀಶರವರ ಮುಂದೆ ನಾನು

ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಸದರಿ ಹೇಳಿಕೆಯನ್ನು ನಿರಾಕರಿಸಿರುವ ಕಾರಣ ಸದರಿ ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.